

ಫುಟ್‌ಬಾಲ್ ಪಂದ್ಯದ ಭವಿಷ್ಯ ನುಡಿದ ಹಂದಿ

ಹುಲ್ಲುಗಾವಲಿನಲ್ಲಿ ಕೆಲಸ ಮಾಡುತ್ತಿದ್ದಾಗ, ಇದೇ ಈ ನೀಲಿ ಜಿಂಕೆಗಳು ಇದ್ದಕ್ಕಿದ್ದಂತೆ ಓಡತೊಡಗಿದವು, ಅದೂ ತಂಡೋಪತಂಡವಾಗಿ! ಎಲ್ಲಿಗೆ ಗೊತ್ತೇ? ಭದ್ರತಾ ಸಿಬ್ಬಂದಿಯ ನಿವಾಸದ ಕಡೆಗೆ! ಸಾಮಾನ್ಯವಾಗಿ ಮಾನವ ವಾಸಸ್ಥಾನದಿಂದ ಈ ಪ್ರಾಣಿಗಳು ಮಾರುದೂರ ಓಡುತ್ತವೆ. ಆದರೆ ಇಂದೇಕೆ ಹೀಗೆ ವರ್ತಿಸುತ್ತಿವೆ.. ಎನ್ನುವುದು ಅಲ್ಲಿದ್ದವರಿಗೆ ಅಚ್ಚರಿಯ ಸಂಗತಿಯಾಗಿತ್ತು.

ಈ ಪ್ರಾಣಿಗಳ ವಿಚಿತ್ರ ವರ್ತನೆಯಿಂದ ಎಚ್ಚೆತ್ತ ಕಾರ್ಮಿಕರು ತಕ್ಷಣ ಹುಲ್ಲುಗಾವಲಿನಿಂದ ಓಡಿಹೋಗಿ ಸುರಕ್ಷಿತ ಸ್ಥಳಗಳಲ್ಲಿ ನಿಂತುಕೊಂಡರು. ಮತ್ತೆ ಮೂರೇ ಗಂಟೆಗಳಲ್ಲಿ ನದಿಯ ಪ್ರವಾಹವು ಉಕ್ಕಿ ಹರಿದು ಹುಲ್ಲುಗಾವಲು ಮುಳುಗಿಹೋಯಿತು. ನೀಲಿ ಜಿಂಕೆಗಳಿಂದಾಗಿ ಹದಿನೆಂಟು ಜನರ ಪ್ರಾಣ ಉಳಿಯಿತು!

ಕೆಲ ವರ್ಷಗಳ ಹಿಂದೆ ಗುಜರಾತಿನ ಧಾರಿ ಅರಣ್ಯಪ್ರದೇಶದಲ್ಲಿ ಸಿಂಹಗಳು ತಾವು ವಾಸಿಸುವ ಪ್ರದೇಶವನ್ನು ಬಿಟ್ಟು ಬೇರೆಡೆಗೆ ತೆರಳಿದ್ದವು. ಅದಾದ ಹತ್ತೇ ದಿನಗಳಲ್ಲಿ ಆ ಪ್ರದೇಶದಲ್ಲಿ ಭಾರೀ ಪ್ರವಾಹ ಉಂಟಾಗಿತ್ತು!

ಸದ್ಯದಲ್ಲೇ ಭೂಕಂಪವಾಗಲಿದೆ ಎಂದು ಪ್ರಾಣಿಗಳಿಗೆ ಮನುಷ್ಯರಿಗಿಂತಲೂ ಮೊದಲೇ ತಿಳಿದುಬಿಡುತ್ತದೆಯೇ? ‘ಹೌದು’ ಎನ್ನುತ್ತವೆ ಕೆಲವು ದೃಷ್ಟಾಂತಗಳು.

ಕ್ರಿ.ಪೂ. 373ರಲ್ಲಿ ಗ್ರೀಸ್‌ನಲ್ಲಿ ಭಾರೀ ಭೂಕಂಪ ಸಂಭವಿಸಿತ್ತು. ಇಲಿ, ಹಾವು, ಶತಪದಿ ಮುಂತಾದ ಪ್ರಾಣಿಗಳು ಭೂಕಂಪಕ್ಕಿಂತ ಕೆಲ ದಿನಗಳ ಮೊದಲೇ ಸುರಕ್ಷಿತ ಸ್ಥಳಗಳಿಗೆ ವಲಸೆ ಹೋದುವಂತೆ. ಭೂಕಂಪ ಆಗುವುದಕ್ಕಿಂತ ಮೊದಲು ಕೆಲ ಪ್ರಾಣಿಗಳು, ಜಲಚರಗಳು, ಹಕ್ಕಿಗಳು, ಸರೀಸೃಪಗಳು, ಕೀಟಗಳು ವಿಚಿತ್ರ ವರ್ತನೆಯನ್ನು ತೋರುತ್ತವೆ ಎಂಬುದು ಹಲವರ ಅಂಬೋಣ.

2008ರಲ್ಲಿ ಚೀನಾದಲ್ಲಿ ಭಾರೀ ಭೂಕಂಪ ಸಂಭವಿಸಿತು. ಇದಕ್ಕೆ ಮುನ್ನ ಜೀಬ್ರಾಗಳು ತಲೆಯನ್ನು ಬಾಗಿಲಿಗೆ ಗುದ್ದಿಕೊಂಡಿದ್ದವು. ಆನೆಗಳು ಸೊಂಡಿಲನ್ನು ಅತ್ತಿತ್ತ ತೂಗಾಡಿಸಿ ವಿಚಿತ್ರ ವರ್ತನೆ ತೋರಿದ್ದವು. ಹುಲಿ, ಸಿಂಹಗಳು ನಿದ್ದೆಯಿಂದ ಹಠಾತ್ತನೆ ಎಚ್ಚೆತ್ತು ಓಡಿದ್ದವು. ಏನೋ ಅನಾಹುತವಾದಂತೆ ನವಿಲುಗಳು ನಿರಂತರವಾಗಿ ಕಿರುಚಿಕೊಂಡಿದ್ದವು.

2001ರಲ್ಲಿ ಗುಜರಾತ್‌ನಲ್ಲಿ ಭೂಕಂಪ ಸಂಭವಿಸಿದಾಗ ನಾಯಿಗಳು ದಿಗಿಲಿಗೀಡಾದಂತೆ ಓಡಿದ್ದವು. ವಿಚಿತ್ರವಾಗಿ ಊಳಿಟ್ಟು ಬೊಗಳಿದ್ದವು. 2005ರಲ್ಲಿ ಏಷ್ಯಾದಲ್ಲಿ ಸುನಾಮಿ ಅಪ್ಪಳಿಸಿದಾಗಲೂ ಪ್ರಾಣಿಗಳು ಇದೇ ಥರದ ವರ್ತನೆ ತೋರಿದ್ದವು ಎನ್ನುತ್ತಾರೆ ಪ್ರತ್ಯಕ್ಷದರ್ಶಿಗಳು. ಶ್ರೀಲಂಕಾ ಮತ್ತು ಭಾರತದ ಸಮುದ್ರತೀರದಲ್ಲಿ ಸುನಾಮಿ ಅಪ್ಪಳಿಸುವ ಮುನ್ನ ಫ್ಲೆಮಿಂಗ್ ಪಕ್ಷಿಗಳು ಎತ್ತರದ ಪ್ರದೇಶಗಳಿಗೆ ವಲಸೆ ಹೋಗಿದ್ದವು. 1975ರಲ್ಲಿ ಚೀನಾದಲ್ಲಿ ಭಾರೀ ಭೂಕಂಪ ಸಂಭವಿಸಿತ್ತು. ಅದು ಎರಡು ಸಾವಿರದಷ್ಟು ಜನರನ್ನು ಬಲಿ ಪಡೆದುಕೊಂಡಿತ್ತು. ಆ ಸಮಯದಲ್ಲಿಯೂ ಪ್ರಾಣಿಗಳು ವಿಚಿತ್ರ ನಡವಳಿಕೆಯನ್ನು ತೋರಿದ್ದವು.

ಈ ವರ್ಷದ ಆದಿಯಲ್ಲಿ ಜಪಾನ್‌ನಲ್ಲಿ ಭೂಕಂಪ ಉಂಟಾಗಿತ್ತು. ಈ ಭೂಕಂಪವಾಗುವ ಕೆಲ ದಿನಗಳ ಮುನ್ನ ಆನೆ ಮತ್ತು ಕೋತಿಗಳು ಎತ್ತರದಲ್ಲಿರುವ ಬೇರೆ ಪ್ರದೇಶಗಳಿಗೆ ತೆರಳಿದ್ದವು. ಹಾಗೆಯೇ ಹಸುಗಳು, ನಾಯಿಗಳು ಮತ್ತು ಇನ್ನಿತರ ಸಾಕುಪ್ರಾಣಿಗಳು ಕೂಡ ವಿಚಿತ್ರ ವರ್ತನೆ ತೋರಿದ್ದವಂತೆ.

## ವಿಜ್ಞಾನಿಗಳು ಏನನ್ನುತ್ತಾರೆ?

ಆರನೇ ಇಂದ್ರಿಯ ಪ್ರಾಣಿಗಳಲ್ಲಿಲ್ಲ ಎನ್ನುತ್ತಾರೆ ವಿಜ್ಞಾನಿಗಳು. ಭೂಕಂಪವಾಗುವ ಮುನ್ನ ಭೂಮಿಯೊಳಗಿನ ಶಿಲೆಗಳ ಚಲನೆಯಿಂದ ಉಂಟಾಗುವ ಎಲೆಕ್ಟ್ರಿಕ್ ಸಿಗ್ನಲ್‌ಅನ್ನು ಪ್ರಾಣಿಗಳು ಬಹು ಬೇಗನೆ ಗ್ರಹಿಸಿಕೊಳ್ಳುತ್ತವೆ. ಮನುಷ್ಯನಾದರೋ ಅಷ್ಟು ಬೇಗನೆ ಗ್ರಹಿಸಿಕೊಳ್ಳಲಾರ. ಹಾಗಾಗಿ ಅವು ಮುಂಜಾಗ್ರತೆ ವಹಿಸುತ್ತವೆ ಎನ್ನುತ್ತಾರೆ ಭೂವಿಜ್ಞಾನಿಗಳು.

ಭೂಕಂಪನದ ಮೊದಲ ತರಂಗಗಳು ಭೂಕಂಪದ ಕೇಂದ್ರಬಿಂದುವಿನಿಂದ ವೇಗವಾಗಿ ಚಲಿಸತೊಡಗುತ್ತವೆ. ಇದನ್ನು ಮನುಷ್ಯ ಗ್ರಹಿಸುವುದು ತೀರಾ ಅಪರೂಪ. ಆದರೆ ಪ್ರಾಣಿಗಳು ಈ ಮೊದಲ ತರಂಗಗಳನ್ನು ಗ್ರಹಿಸಿಬಿಡುತ್ತವೆ. ಎರಡನೆಯ ದೊಡ್ಡ ತರಂಗದಿಂದ ಭೂಮಿಯಲ್ಲಿ ಕಂಪನ ಉಂಟಾಗಿ ಹಾನಿ ಸಂಭವಿಸುತ್ತದೆ. ಪ್ರಾಣಿಗಳು ಮೊದಲ ತರಂಗಗಳನ್ನು ಗ್ರಹಿಸುವ ಕಾರಣ ವಿಚಿತ್ರವಾಗಿ ವರ್ತಿಸುತ್ತವೆ ಅಥವಾ ವಲಸೆ ಹೋಗುತ್ತವೆ ಎನ್ನುವುದು ಭೂವಿಜ್ಞಾನಿಗಳ ಅಭಿಮತ.

ಪ್ರಾಣಿಗಳು ಭವಿಷ್ಯ ಹೇಳುತ್ತವೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ ಎನ್ನುತ್ತಾರೆ ವಿಜ್ಞಾನಿಗಳು. ಅವುಗಳು ತಮ್ಮಲ್ಲಿರುವ ಗ್ರಹಣಶಕ್ತಿಯನ್ನು ಮಾನವರಿಗಿಂತಲೂ ಸಮರ್ಥವಾಗಿ ಬಳಸಿಕೊಳ್ಳುತ್ತವೆ. ಅವುಗಳ ಗ್ರಹಣೇಂದ್ರಿಯವು ಬಲು ಚುರುಕು. ನಾಯಿ, ಆನೆ, ಬಾವಲಿ, ಜಿಂಕೆ ಮೊದಲಾದ ಪ್ರಾಣಿಗಳು ಅತಿ ದೂರದವರೆಗಿನ ಶಬ್ದವನ್ನು ಕೇಳಿಸಿಕೊಳ್ಳಬಲ್ಲವು. ಅದರಲ್ಲೂ ನಾಯಿಗೆ ಆಘ್ರಾಣಿಸುವ, ವಾಸನೆ ಗ್ರಹಿಸುವ ಶಕ್ತಿಯೂ ಹೆಚ್ಚು ಎಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.

ಅದೇನೇ ಇದ್ದರೂ, ಕೆಲ ಪ್ರಾಣಿಗಳು ಅನಾಹುತಗಳ ಬಗ್ಗೆ ತಮ್ಮ ಗ್ರಹಣ ಸಾಮರ್ಥ್ಯದಿಂದ ಮುನ್ಸೂಚನೆ ನೀಡುವುದಂತೂ ಸತ್ಯ. ಆದರೆ ಚುನಾವಣೆ, ಕ್ರೀಡೆ ಇತ್ಯಾದಿಗಳಲ್ಲಿ ಜಯ ಗಳಿಸುವವರು ಯಾರು ಎಂಬ ಬಗ್ಗೆ ಅವು ನಿಖರವಾಗಿ ಹೇಗೆ ಭವಿಷ್ಯ ನುಡಿಯುತ್ತವೆ ಎಂಬುದಕ್ಕೆ ಇನ್ನೂ ಖಚಿತ ಉತ್ತರ ಸಿಕ್ಕಿಲ್ಲ.